**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ವಿಶೇಷ ಆಯುಕ್ತರು (ಆಡಳಿತ) ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560002.**

---

ಸಂಖ್ಯೆ:ಬಿಬಿಎಂಪಿ/ವಿಆ(ಆ)/ಪಿಆರ್/3237/2021-22 ದಿನಾಂಕ:07-10-2021

ಎಲ್ಲಾ ವಾರ್ಡ್‌ಗಳ ನೋಡಲ್ ಅಧಿಕಾರಿಗಳು /
ಎಲ್ಲಾ ವಲಯ ಅಪರ / ಜಂಟಿ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ
ಸೂಕ್ತ ಕ್ರಮಕ್ಕಾಗಿ.

# ಸುತ್ತೋಲೆ

ವಿಷಯ: ಕಡ್ಡಾಯವಾಗಿ ವಾರ್ಡ್ ಸಮಿತಿ ಸಭೆ ನಡೆಸುವ ಬಗ್ಗೆ.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ ಸಮಿತಿ ಸಭೆಗಳನ್ನು ನಡೆಸಲು ನೋಡಲ್ ಅಧಿಕಾರಿಗಳನ್ನು ಪರಿಷ್ಕರಿಸಿ, ಆದೇಶ ಹೊರಡಿಸಲಾಗಿರುತ್ತದೆ. ಆದಾಗ್ಯೂ, ಕೆಲವು ವಾರ್ಡ್‌ಗಳಲ್ಲಿ ವಾರ್ಡ್ ಸಮಿತಿ ಸಭೆಗಳನ್ನು ನಿರಂತರವಾಗಿ ನಡೆಸುತ್ತಿಲ್ಲವೆಂದು ದೂರುಗಳು ಸ್ವೀಕೃತವಾಗುತ್ತಿರುತ್ತವೆ. ಈಗಾಗಲೇ ವಿಡಿಯೋ ಸಂವಾದದ ಮೂಲಕ ಮಾನ್ಯ ಮುಖ್ಯ ಆಯುಕ್ತರವರು ಈ ಬಗ್ಗೆ ಸೂಕ್ತ ಸೂಚನೆ ನೀಡಿರುತ್ತಾರೆ. ಆದ್ದರಿಂದ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಸೂಚಿಸಿದೆ:-

(1) ವಾರ್ಡ್ ಸಮಿತಿ ಸಭೆಗಳನ್ನು ಈಗಾಗಲೇ ಹೊರಡಿಸಿರುವ ಸುತ್ತೋಲೆ / ಜ್ಞಾಪನದಲ್ಲಿ ಸೂಚಿಸಿರುವಂತೆ ನಿಗಧಿತ ಸಮಯದಲ್ಲಿ / ಸಕಾಲದಲ್ಲಿ ನಡೆಸತಕ್ಕದ್ದು.

(2) ವಾರ್ಡ್ ಸಭೆ ನಿಗಧಿಪಡಿಸಿದ ತಕ್ಷಣ ಸಭೆಯ ಪೂರ್ವಭಾವಿಯಾಗಿ ಸಭಾ ಸೂಚನಾ ಪತ್ರ / ನೋಟೀಸ್ ಅನ್ನು ಪಾಲಿಕೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

(3) ಸಭೆ ನಡೆದ ನಂತರ ಸಭಾ ನಡವಳಿಗಳನ್ನು ತಯಾರಿಸಿ ಪಾಲಿಕೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

ಈ ಮೇಲ್ಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ.

7/10/21

ವಿಶೇಷ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:**

- ಎಲ್ಲಾ ವಲಯ ಆಯುಕ್ತರು / ವಿಶೇಷ ಆಯುಕ್ತರು, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ಮಾಹಿತಿ ತಂತ್ರಜ್ಞಾನ ಸಲಹೆಗಾರರು, ಬಿಬಿಎಂಪಿ ರವರು ವಾರ್ಡ್ ಸಮಿತಿ ಸಭಾ ಸೂಚನಾ ಪತ್ರ / ನೋಟೀಸ್ & ಸಭಾ ನಡವಳಿಗಳನ್ನು ಪಾಲಿಕೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅಳವಡಿಸಲು ಅವಕಾಶ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.
- ಕಛೇರಿ ಪ್ರತಿ.

Office of the IT Advisor
Bruhat Bangalore Mahanagara Palike
No. 09
Date 16/10/21

Pr.M

16/10